**ಕರ್ನಾಟಕ ಸರ್ಕಾರ**

ಸಂಖ್ಯೆ:ಕಂಇ 97 ಮುಅಬಿ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:10-11-2020

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ,
14/3, ಅನೆಕ್ಸ್ ಬಿಲ್ಡಿಂಗ್, 3ನೇ ಮಹಡಿ,
ಶ್ರೀ ಅರವಿಂದ ಭವನ, ಮಿಥಿಕ್ ಸೊಸೈಟಿ ಆವರಣ,
ನೃಪತುಂಗ ರಸ್ತೆ, ಬೆಂಗಳೂರು-560 001.

ಮಾನ್ಯರೆ,

ವಿಷಯ:- ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಬ್ರಾಹ್ಮಣ ಜನಾಂಗದ ತ್ರಿಮತಸ್ಥ ಉಪನೀತ ವಟುಗಳು ಸೇರಿದಂತೆ ಎಲ್ಲಾ ಗೃಹಸ್ಥರಿಗೆ ನಿತ್ಯಾ ದೇವತಾರ್ಚನೆ ಶಿಬಿರ ಮತ್ತು ಪೂಜಾ ತರಬೇತಿ ಶಿಬಿರ ಹಮ್ಮಿಕೊಂಡಿರುವ ಕುರಿತು.

ಉಲ್ಲೇಖ:- ಪತ್ರ ಸಂಖ್ಯೆ:ಕೆ.ಬಿ.ಡಿ.ಬಿ/ಸಿಆರ್/28/2020-21, ದಿನಾಂಕ:16.09.2020.

/ * /

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆ ಗಮನ ಸೆಳೆಯಲಾಗಿದೆ. ಸದರಿ ಪತ್ರದಲ್ಲಿ ಕೋರಿರುವುದರನ್ವಯ ಪ್ರಸ್ತಾವನೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬ್ರಾಹ್ಮಣ ಸಮುದಾಯದ ತ್ರಿಮತಸ್ಥ ಉಪನೀತ ವಟುಗಳಿಗೂ ಸೇರಿದಂತೆ ಎಲ್ಲಾ ಗೃಹಸ್ಥರಿಗೆ ನಿತ್ಯ ದೇವತಾರ್ಚನೆ ಶಿಬಿರ ನಡೆಸಲು ಹಾಗೂ ರಾಜ್ಯದ ಸಿ-ದರ್ಜೆಯ ಮುಜರಾಯಿ ದೇವಾಲಯಗಳು ಮತ್ತು ಸಣ್ಣಪುಟ್ಟ ಹಳ್ಳಿಗಳಲ್ಲಿರುವ ದೇವಾಲಯದ ತ್ರಿಮತಸ್ಥ ಅರ್ಚಕರುಗಳಿಗೆ ವಸತಿ ಸಹಿತ ಆಗಮ ಪೂಜಾ ತರಬೇತಿ ಶಿಬಿರವನ್ನು ನಡೆಸಲು ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ಉದ್ದೇಶಿಸಿರುತ್ತದೆ. ಈ ಶಿಬಿರಗಳಲ್ಲಿ ಪಾಠ ಮಾಡಲು ಬರುವ ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ತರಬೇತಿ ಶಿಬಿರಕ್ಕೆ ರೂ.5,000/-ಗಳ ಗೌರವಧನ ಹಾಗೂ ಶಿಬಿರಾರ್ಥಿಗಳಿಗೆ ರೂ.500/-ಗಳ ಪ್ರೋತ್ಸಾಹ ಧನ ನೀಡಲು ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾಪಿಸಿರುವ ಯೋಜನೆಗಳನ್ನು ಜಾರಿಗೆ ತರಲು ಅನುಮತಿ ನೀಡಲಾಗಿದೆ ಮತ್ತು ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 4059-80-051-0-55-(132) ಇದರಡಿಯಲ್ಲಿ ಲಭ್ಯವಿರುವ ಮೊತ್ತದಲ್ಲಿ ಭರಿಸಲು ಅನುಮತಿ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

M.L. Varalakshmi 10/11/2020
(ಎಂ.ಎಲ್.ವರಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

207
18/11/20

18/11